# ✻ ಸ್ವಾಮಿ ವಿವೇಕಾನಂದರ ತಂದೆ ಬರೆದ ಕಾದಂಬರಿ 'ಸುಲೋಚನಾ' ✻

ಬ್ರ. ಅದ್ವೈತ ಚೈತನ್ಯ


ಶ್ರೇಷ್ಠತೆಯು ರಕ್ತದಲ್ಲಿ ಹರಿದುಬರುತ್ತದೆ ಎನ್ನುವ ನಂಬಿಕೆಗೆ ಇಂಬುಕೊಡುವ, ಸ್ವಾಮಿ ವಿವೇಕಾನಂದರಿಗೆ ಸಂಬಂಧಪಟ್ಟ ಹೊಸ ವಿವರವನ್ನು ಆಂಗ್ಲಪತ್ರಿಕೆ 'ವೇದಾಂತ ಕೇಸರಿ'ಯಿಂದ ಸಂಗ್ರಹಿಸಲಾಗಿದೆ. ಲೇಖಕರು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯನ್ನು ಬರೆದ ಕೆಲವು ಲೇಖಕರು ಅವರ ತಂದೆ ವಿಶ್ವನಾಥ ದತ್ತರ ಬಗ್ಗೆ ಬರೆಯುತ್ತ, ಅವರು ಒಬ್ಬ ಕಾದಂಬರಿಕಾರರು ಎಂದು ಹೇಳಿದ್ದಾರೆ. ಬಂಗಾಳಿ ಲೇಖಕರಾದ ಶ್ರೀ ಶಂಕರ್ ಅವರು ಸಂಶೋಧನೆ ಮಾಡಿ ವಿಶ್ವನಾಥ ದತ್ತರು ಬರೆದ ಕಾದಂಬರಿ 'ಸುಲೋಚನಾ'ವನ್ನು ಇತ್ತೀಚೆಗೆ ಬೆಳಕಿಗೆ ತಂದಿದ್ದಾರೆ. ಇನ್ನೂರ ನಲವತ್ತೈದು ಪುಟಗಳ ಈ (ಬಂಗಾಳಿ ಭಾಷೆಯ) ಕಾದಂಬರಿಯ ಪುನರ್ಮುದ್ರಣವನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್ ಇತ್ತೀಚೆಗೆ ಬಿಡುಗಡೆ ಮಾಡಿದರು.

"ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯನ್ನು ಬರೆದ ಅವರ ಸಹೋದರ ಭೂಪೇಂದ್ರನಾಥ ದತ್ತ ಅವರು, ತಮ್ಮ ತಂದೆ ಒಂದು ಪುಸ್ತಕವನ್ನು ಬರೆದಿದ್ದುದಾಗಿ ತಿಳಿಸಿದ್ದರು. ಬಂಗಾಳಿ ಕಾದಂಬರಿಗಳಲ್ಲಿ ಅತ್ಯಂತ ಹಳೆಯ ಕೃತಿಗಳಲ್ಲೊಂದು ಇದು. ಬಂಕಿಮಚಂದ್ರರ 'ಆನಂದಮಠ'ಕ್ಕಿಂತಲೂ ಹಿಂದಿನದು" ಎನ್ನುತ್ತಾರೆ ಇದನ್ನು ಸಂಶೋಧಿಸಿ ಪ್ರಕಾಶಿಸಿದ ಶಂಕರ್ ಅವರು.

೧೮೮೦ರಲ್ಲಿ ಪ್ರಕಟವಾಗಿದ್ದ ಈ ಕೃತಿಯ ಹಳೆಯ ಪ್ರತಿಯೊಂದನ್ನು ಪಡೆಯಲು ಎಲ್ಲೆಡೆ ಪ್ರಯತ್ನಿಸಿ, ಕಡೆಗೆ ವಿದೇಶೀ ಗ್ರಂಥಾಲಯವೊಂದರಲ್ಲಿ ಹುಡುಕಿ ತೆಗೆದರು ಶಂಕರ್. ಆಗ ಇದರ ಬೆಲೆ ಕೇವಲ ಒಂದು ರೂಪಾಯಿ. ಹಣದ ಕೊರತೆಯಿಂದಾಗಿ ಕಾದಂಬರಿಯನ್ನು ಬರೆದನಂತರ ಅದರ ಹಕ್ಕುಗಳನ್ನು ಗೋಪಾಲಚಂದ್ರ ಎನ್ನುವವರಿಗೆ ಮಾರಿಬಿಟ್ಟರು ವಿಶ್ವನಾಥ ದತ್ತ. ಆದ್ದರಿಂದ ಕಾದಂಬರಿಯಲ್ಲಿ ವಿಶ್ವನಾಥರ ಹೆಸರನ್ನು ಲೇಖಕರೆಂದು ಉಲ್ಲೇಖಿಸಿಲ್ಲ. ಸಂಶೋಧನೆಯಿಂದ ತಿಳಿದುಬಂದ ಮಾಹಿತಿಗಳನ್ನು ಸುದೀರ್ಘವಾದ ಮುನ್ನುಡಿಯಲ್ಲಿ ಶಂಕರ್ ವಿವರಿಸಿದ್ದಾರೆ. ಇಡೀ ಪುಸ್ತಕವನ್ನೇ ಛಾಯಾಚಿತ್ರದಲ್ಲಿ ಸೆರೆಹಿಡಿದು ಹಾಗೆಯೇ ಮುದ್ರಿಸಲಾಗಿದೆ. ಹೊಸದಾಗಿ ಅಕ್ಷರಜೋಡಣೆಯನ್ನಾಗಲೀ ಮತ್ತಾವುದೇ ಬದಲಾವಣೆಯನ್ನಾಗಲೀ ಮಾಡಿಲ್ಲ. ಇಷ್ಟೆಲ್ಲ ಶ್ರಮವಹಿಸಿದ ಬಳಿಕ ಅದನ್ನೀಗ ಪ್ರಕಟಿಸಿದ್ದಾರೆ.

ಸಾಹಿತ್ಯಿಕ ದೃಷ್ಟಿಯಿಂದ 'ಸುಲೋಚನಾ'ದಲ್ಲಿ ಅನೇಕ ವಿಶೇಷತೆಗಳಿವೆ. ಆತ್ಮಕಥನದಂತಿರುವ ಇದರ ಕಥೆ ೧೯ನೇ ಶತಮಾನದ ಕೌಟುಂಬಿಕ ಸಮಸ್ಯೆಗಳ ಸುತ್ತ ನಡೆಯುತ್ತದೆ.




ವಿಶ್ವನಾಥ ದತ್ತರು ಬರೆದ ಕಾದಂಬರಿ 'ಸುಲೋಚನಾ'ದ ಪುನರ್ಮುದ್ರಣದ ಮುಖಪುಟ

ನಾಯಕ ಪಾತ್ರವಾದ ರಾಮಹರಿ ಬಸುವಿನ ವ್ಯಕ್ತಿತ್ವ ವಿಶ್ವನಾಥ ದತ್ತರನ್ನೇ ಹೋಲುತ್ತದೆ. ಲೇಖಕರಂತೆ ಈ ನಾಯಕನೂ ಅನೇಕ ಕಲಹಗಳಿಂದ ದೈಹಿಕ, ಮಾನಸಿಕ ಯಾತನೆಗಳನ್ನು ಅನುಭವಿಸಿ ದಿವಾಳಿಯೆದ್ದು ಹೋಗುತ್ತಾನೆ. ಕಥಾನಾಯಕ ರಾಮಹರಿ ಬಸು ಕಲ್ಕತ್ತ ಬಿಟ್ಟು ಒಬ್ಬ ಮಾರವಾರಿ ವರ್ತಕನೊಂದಿಗೆ ದೆಹಲಿಗೆ ಬರುತ್ತಾನೆ. ತನ್ನ ಸಂಪಾದನೆಯಿಂದ ಮನೆಗೆ ಹಣ ಕಳುಹಿಸುತ್ತಾನೆ, ಪತ್ನಿ ಸುಲೋಚನೆಯ ಹೆಸರಿನಲ್ಲಿ ಜಮೀನು ಖರೀದಿಸುತ್ತಾನೆ. ಆದರೆ ಅವನ ಚಿಕ್ಕಪ್ಪ ಅದನ್ನೆಲ್ಲ ನುಂಗಿಹಾಕುತ್ತಾನೆ. ವಿಶ್ವನಾಥ ದತ್ತರ ಜೀವನದಲ್ಲೂ ಇದೇ ನಡೆಯಿತು. ದಾಯಾದಿ ಕಲಹದಿಂದ ದರಿದ್ರವಾದ ಕುಟುಂಬದ ನಿರ್ವಹಣೆಗಾಗಿ ಕೋರ್ಟು ಕಛೇರಿಗಳಿಗೆ ಅಲೆದು ವಿವೇಕಾನಂದರು ಸಾಲ ಮಾಡಬೇಕಾದ ಸನ್ನಿವೇಶವನ್ನು ಇವು ನೆನಪಿಸುತ್ತವೆ.

ಈ ಕಾದಂಬರಿಯಲ್ಲಿ ವಿಶ್ವನಾಥ ದತ್ತ, ಅವರ ಪತ್ನಿ ಭುವನೇಶ್ವರೀ ದೇವಿ ಹಾಗೂ ಮಗ ನರೇಂದ್ರ (ಸ್ವಾಮಿ ವಿವೇಕಾನಂದರು) ಇವರನ್ನು ಕುರಿತ ಹಲವು ಚಿತ್ರಣಗಳು ದೊರಕುತ್ತವೆ. ರಾಮಹರಿ ಬಸು ದೆಹಲಿಯಿಂದ ಕಲ್ಕತ್ತೆಗೆ ಮಾಡುವ ಇಪ್ಪತ್ತೈದು ದಿನಗಳ ಪ್ರಯಾಣವು, ಸ್ವಾಮಿ ವಿವೇಕಾನಂದರು ತಮ್ಮ ಕಿಶೋರಾವಸ್ಥೆಯಲ್ಲಿ ತಂದೆ, ತಾಯಿ, ತಮ್ಮಂದಿರೊಡನೆ ರಾಯಪುರಕ್ಕೆ ಮಾಡಿದ್ದ ಪ್ರಯಾಣವನ್ನು ನೆನಪಿಸುತ್ತದೆ. ಯುವಕ ನರೇಂದ್ರನ ಬೆಳವಣಿಗೆಯ ದಿನಗಳು ಹಾಗೂ ಅವನು ಮುಂದೆ ಎದುರಿಸಿದ ಕಷ್ಟಗಳ ಬಗ್ಗೆ ಈ ಕಾದಂಬರಿ ಒಂದು ಇಣುಕುನೋಟವನ್ನು ಬೀರುತ್ತದೆ. ✪